**<u>ಅಸಲು ದಾವಾ ಸಂಖ್ಯೆ - 181/2014</u>** **ಪಿ.ಡಬ್ಲ್ಯೂ:-2**

ದಿನಾಂಕಃ **01-10-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- **2** ನೇ ಪ್ರತಿವಾದಿ ಪರ ವಕೀಲರಿಂದ :-</u>

ಈ ದಾವೆಯನ್ನು ನನ್ನ ಮಾವ ನಿಂಗರಾಜಪ್ಪ ಸಲ್ಲಿಸಿದ್ದರು ಎಂದರೆ ಸರಿ. ದಾವಾ ಪತ್ರದಲ್ಲಿ ನಮೂದಾಗಿರುವ ವಿಚಾರ ನನಗೆ ಗೊತ್ತು. ದಾವಾ ಆಸ್ತಿಯ ಸರ್ವೆ ನಂ.67/4 ಪಿ1 ಅದರ ವಿಸ್ತೀರ್ಣ 1 ಎಕರೆ. ಸರ್ವೆ ನಂ.67/4 ಪಿ1 ರ ಆಸ್ತಿಯ 1 ಎಕರೆ 38 ಗುಂಟೆ ಜಮೀನಿನ ಪಕ್ಕದಲ್ಲಿ ರಾಮಪ್ಪರವರ ಜಮೀನು ಇದೆ ಎಂದರೆ ಸರಿ. ರಾಮಪ್ಪರವರು ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ರಾಮಪ್ಪರವರ ಜಮೀನು ಇದೆ. ದಾವಾ ಆಸ್ತಿಯ ಸುತ್ತ ಮುತ್ತ ವೀರಪ್ಪ, ರುದ್ರಪ್ಪ ಮತ್ತು ರಾದಮ್ಮ ರವರ ಜಮೀನು ಇರುವುದಿಲ್ಲ. ದಾವಾ ಆಸ್ತಿಯು ಮೂಲತಹ ನನ್ನ ಗಂಡನ ತಂದೆಯ ತಂದೆ ತಾಯಿಯವರಿಗೆ ಸೇರಿದ್ದು. ದಾವಾ ಆಸ್ತಿಯು ಮೂಲತಹ ನನ್ನ ಗಂಡನ ತಂದೆಯ ತಂದೆ ತಾಯಿಯವರಿಗೆ ಸೇರಿದ್ದು ಅವರನ್ನು ಹೊರತು ಪಡಿಸಿ, ಬೇರೆ ಯಾರಿಗೂ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ. ದಾವಾ ಆಸ್ತಿಯು ನನ್ನ ಮಾವನ ತಾಯಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾ ಆಸ್ತಿಯು ನನ್ನ ಮಾವನ ತಾಯಿಯವರಿಗೆ ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ದಾವಾ ಪತ್ರದಲ್ಲಿ ನಮೂದು ಮಾಡಿದ್ದಾರೆ. ದಾವಾ ಆಸ್ತಿಯು ನನ್ನ ಮಾವನ ತಾಯಿಯವರಿಗೆ ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯು ಶಾಂತಮ್ಮರವರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಶಾಂತಮ್ಮರವರಿಗೆ ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಶಾಂತಮ್ಮರವರ ಹೆಸರಿಗೆ ಪಹಣಿ ಮತ್ತು ಮುಟೇಷನ್ ರಿಜಿಸ್ಟರ್ ನಲ್ಲಿ ಆಸ್ತಿ ಹೇಗೆ ಬಂತು

ಎಂಬ ಬಗ್ಗೆ ನಮೂದಾಗಿರುವುದನ್ನು ನಾನು ನೋಡಿರುವುದಿಲ್ಲ. ಶಾಂತಮ್ಮರವರಿಗೆ ದಾವಾ ಆಸ್ತಿಯು 2014 ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ. ದಾವಾ ಆಸ್ತಿಯು ಶಾಂತಮ್ಮರವರಿಗೆ ಸರ್ಕಾದಿಂದ ಮಂಜೂರಾಗಿಲ್ಲ ಮತ್ತು ದಾವಾ ಆಸ್ತಿಯಲ್ಲಿ ಶಾಂತಮ್ಮರವರಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 2014 ನೇ ಸಾಲಿನ ನಂತರದ ಪಹಣಿಗಳನ್ನು ಹಾಜರುಪಡಿಸಿದ್ದೇನೆ. 2014 ರ ಪೂರ್ವದ ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-3 ರಿಂದ 24 ದಾಖಲೆಗಳಲ್ಲಿ ಶಾಂತಮ್ಮ, ವೀರಪ್ಪ, ರುದ್ರಪ್ಪ, ಹಾಲಪ್ಪ, ಚನ್ನಬಸಪ್ಪ, ರಾಮಪ್ಪ ಮತ್ತು ಹಳದಪ್ಪರವರ ಹೆಸರು ನಮೂದಾಗಿರುತ್ತದೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯವನ್ನು ಕಟ್ಟಿರುವ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. 2014 ನೇ ಸಾಲಿನ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ವಂಶವೃಕ್ಷವನ್ನಾಗಲೀ ಅಥವಾ ಪಡಿತರ ಚೀಟಿಯನ್ನಾಗಲೀ ಹಾಜರುಪರಿಸಿರುವುದಿಲ್ಲ. ದಿಃ 21-03-2014 ರಂದು ವಾದಿ ಮತ್ತು ಪ್ರತಿವಾದಿಗಳ ನಡುವೆ ಏನು ಆಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ನೆನಪಿನ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-24 ದಾಖಲೆಯಲ್ಲಿ ಶಾಂತವ್ವ ರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ-24 ದಾಖಲೆಯಲ್ಲಿ ನಮೂದಾಗಿರುವ ವಿಚಾರ ನನಗೆ ಗೊತ್ತು. ನಿಪಿ-24 ದಾಖಲೆಯಲ್ಲಿ ನಮೂಾದಾಗಿರುವ ವಿಚಾರಗಳು ತಿಳಿಯುತ್ತಿಲ್ಲ. ದಿಃ 18-05-2014 ರಂದು ನಾನು, ನನ್ನ ಗಂಡ ಮತ್ತು ಅತ್ತೆ-ಮಾವ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾಗ ಪ್ರತಿವಾದಿಗಳು ಬಂದು ನಮಗೆ ತೊಂದರೆಯನ್ನು ಉಂಟುಮಾಡಿರುತ್ತಾರೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ನಮೂದು ಮಾಡಿದ್ದೇವೆ. ಈ ಬಗ್ಗೆ ನಮ್ಮ ಮಾವನವರು ಪೊಲೀಸರಿಗೆ ದೂರನ್ನು ಸಲ್ಲಿಸಿದ್ದಾರೆ. ನಮ್ಮ ಮಾವನವರು ಪೊಲೀಸರಿಗೆ ದೂರನ್ನು ಕೊಟ್ಟಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವ ಬಗ್ಗೆ ನಮ್ಮ ಯಜಮಾನರಿಗೆ ಗೊತ್ತು. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಸುಮಾರು 50 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಗಳ ಸ್ವಾಧೀನಾನುಭವದಲ್ಲಿರುವ ದಾವಾ ಆಸ್ತಿಗೆ ತೊಂದರೆಯನ್ನು ಕೊಡುತ್ತಿದ್ದೇವೆ ಎಂದರೆ

ಸರಿಯಲ್ಲ. ಪ್ರತಿವಾದಿಗಳು ನಮ್ಮ ವಿರುದ್ಧ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇನ್ನೊಂದು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.